ಕಥೆ

# ಕಳೆದು ಹೋದ ಮಗು





ಆಂಗ್ಲ ಮೂಲ: **ಮುಲ್ಕರಾಜ್ ಆನಂದ್**

ಕನ್ನಡಕ್ಕೆ: **ಸೊಂದಲಗೆರೆ ಲಕ್ಷ್ಮೀಪತಿ**

ಕಲೆ: ಎಸ್.ವಿ. ಹೂಗಾರ್

ವಸಂತ ಹಬ್ಬದ ಕಾಲವದು. ಚಳಿಗಾಲದ ನೆರಳಲ್ಲಿ ಇಕ್ಕಟ್ಟಾದ ಕಾಲುದಾರಿಯಿಂದ ಹಾಗೂ ಓಣಿಯಿಂದ, ಷೋಕಿಲಾಲರಂತೆ ದಿರಿಸು ಧರಿಸಿದ ಮಂದಿ ಶ್ವೇತವರ್ಣದ ಮೊಲಗಳ ಹಿಂಡು ತಮ್ಮ ನೆಲೆವೀಡಿನಿಂದ ರಜತದ ಕಿಡಿಕೆದರಿ ಹೊರಬಂದಂತೆ, ಬೆಳಗುವ ನಗರದ ಹೊರಭಾಗದ ಜನನಿಬಿಡ ಪ್ರದೇಶದ ಜಾತ್ರೆಗೆ ದಾಪುಗಾಲು ಹಾಕಿ ಬಂದರು. ಕೆಲವರು ನಡೆದು ಬಂದರೆ, ಕೆಲವರು ಕುದುರೆ ಏರಿ ಬಂದರು. ಕೆಲವರು ಬಿದಿರಿನ ಡೋಲಿಯಲ್ಲಿ, ಕೆಲವರು ಎತ್ತಿನ ಗಾಡಿಯಲ್ಲಿ ಕುಳಿತು ಬಂದರು. ಓರ್ವ ಪುಟ್ಟ ಕಿಶೋರ ತನ್ನ ಪೋಷಕರ ಕಾಲುಗಳ ನಡುವೆ ಓಡಾಡುತ್ತಿದ್ದ ಲಗುಬಗನೆ. ಅವನಲ್ಲಿ ಖುಷಿ ಮತ್ತು ಚೈತನ್ಯ ತುಂಬಿ ತುಳುಕಿತ್ತು. ಅಂದಿನ ಮುಂಜಾನೆ, ಪ್ರಕೃತಿಗೆ ಆನಂದದ ಮುಗುಳ್ನಗೆ ಹಾಗೂ ನಿರ್ಲಜ್ಜತೆಯ ಆಹ್ವಾನವನ್ನು ಮುಕ್ತವಾಗಿ ನೀಡಿತ್ತು, ಪುಷ್ಪರಾಶಿ ಮತ್ತು ಸಂಗೀತದ ಓಕುಳಿಯೊಂದಿಗೆ.

‘ಬಾ, ಪಾಪು! ಬಾ!’ ಅದರ ಪೋಷಕರು ಕರೆದರು. ಅದು ನಡಿಗೆಯಲ್ಲಿ ಹಿಂದೆ ಉಳಿದಿತ್ತು. ಆ ಜಾತ್ರೆಯಲ್ಲಿ ದಾರಿಯುದ್ದಕ್ಕೂ ಇದ್ದ ಆಟಿಕೆ ಅಂಗಡಿಗಳ ವರ್ಣರಂಜಿತ ನೋಟ ಅದರ ಗಮನ ತಡೆ ಹಿಡಿದು ಅದು ಹಿಂದೆ ಬೀಳಲು ಕಾರಣವಾಗಿತ್ತು. ಮಗು ಈಗ ದಡಬಡಿಸಿ ಓಡಿತು ಪೋಷಕರ ಎಡೆಗೆ. ಅವರ ಕರೆಗೆ ಅದರ ಸುಂದರ ಪುಟ್ಟ ಕಾಲುಗಳು ವಿಧೇಯವಾಗಿದ್ದವು. ಆದರೆ, ಅದರ ಕಣ್ಣುಗಳು ಮಾತ್ರ ಹಿಂದು ಹಿಂದಕ್ಕೆ ಸರಿದ ಆಟಿಕೆಗಳ ಮೇಲೆಯೇ ನೆಟ್ಟಿದ್ದವು. ಅವನ ಅಪ್ಪಅಮ್ಮ ಅವನಿಗಾಗಿ ಕಾದು ನಿಂತಿದ್ದ ಸ್ಥಳಕ್ಕೆ ಅದು ಓಡೋಡಿ ಬರುತ್ತಿದ್ದಂತೆ, ಅದಕ್ಕೆ ತನ್ನ ಮನದಾಸೆಯನ್ನು ಹತ್ತಿಕ್ಕಲಾಗಲಿಲ್ಲ. ತನ್ನಪ್ಪ ಹಾಗೂ ಅಮ್ಮನ ಎಂದಿನ ದುರುಗುಟ್ಟುವಿಕೆಯ ತಿರಸ್ಕಾರದ ಕಣ್ಣೋಟದ ಅರಿವಿದ್ದ ಅದು ‘ಆ ಆಟಿಕೆ ನಂಗೆ ಬೇಕು’ ಎಂದು ಒತ್ತಾಯಿಸಿತು. ಅವನಪ್ಪ ಎಂದಿನ ವಾಡಿಕೆಯಂತೆ ದುರುಗುಟ್ಟಿದ ಅದರ ಕಡೆ. ಅವನ ಅಮ್ಮನ ಆ ದಿನದ ಚೈತನ್ಯ ಕರಗಿ ಹೋಗಿತ್ತು. ಆಕೆ ದಯಾರ್ದ್ರಳಾಗಿ ತನ್ನ ಬೆರಳನ್ನು ಹಿಡಿಯಲು ಅದರ ಮುಂದಕ್ಕೆ ಚಾಚಿದಳು: ‘ನೋಡು ಪಾಪು, ಏನದು... ಮುಂದಿರೋದು?’ ಎಂದು ಕೇಳಿದಳು ಆಕೆ.

ಅದರ ತಣಿಯದ ಆಸೆಯಿಂದ ಸ್ಫುರಿಸಿದ ಜುಗುಪ್ಸೆಯ ಕಾರಣ, ದುಃಖ ಉಮ್ಮಳಿಸಿ ಬಂದು ಅದು